## ಅತ್ಯುತ್ತಮ ಸಂಚಿಕೆ

ಈ ಗುರುವಾರ (ಮೇ 19ರ ಸಂಚಿಕೆ) ಬೆಳಿಗ್ಗೆ 'ಸುಧಾ' ಕೈ ಸೇರುತ್ತಲೇ ಪುಟಪುಟವನ್ನು ತಿರುಗಿಸುತ್ತ ಹೋದಂತೆ ಈಕೆಯನ್ನು ಸಂಗ್ರಹಿಸಿಟ್ಟುಕೊಳ್ಳಬೇಕೆಂಬ ಅಭಿಲಾಷೆಯುಂಟಾಯಿತು. ಅದಕ್ಕೆ ಕಾರಣಗಳು ಹಲವಾರು. ಸಂಚಿಕೆಯಲ್ಲಿನ ವೈವಿಧ್ಯಮಯ ವಿಷಯಗಳೇ ಈ ಸಂಗ್ರಹಕ್ಕೆ ಕಾರಣ. ಕೋಮಲ ಎಂಬ ಯುವತಿ ತಾನು ಬರೀ ಕೋಮಲಳಲ್ಲ, ಕಠಿಣವೂ ಹೌದು ಎನ್ನುತ್ತ ಬೈಕ್ ಸೋಲೋ ರೈಡಿಂಗ್ ಮಾಡಿರುವ ವಿಷಯವನ್ನು ಸುಮಲತಾ ಎನ್. ಚೆಂದವಾಗಿ ನಿರೂಪಿಸಿದ್ದಾರೆ. ಪಂ. ರಾಜಶೇಖರ ಮನ್ಸೂರ ಅವರ ಬಗ್ಗೆ ಉಮಾ ಅನಂತ್ ಬರೆದಿರುವ ಲೇಖನ ಕಣ್ಣಂಚಿನಲ್ಲಿ ನೀರು ತರಿಸಿತು. ರಶೀದ್‌ಖಾನ್ ಎಂಬ ಯುವಕ ಕ್ರಿಕೆಟ್ ರಂಗದಲ್ಲಿ ಸಾಧಿಸುತ್ತಿರುವ ಬೆಳವಣಿಗೆ ನಿಜಕ್ಕೂ ಅಚ್ಚರಿ ಮೂಡಿಸುವಂತಹುದು. ಅವನ ಸಾಧನೆಯ ಪಯಣವನ್ನು ವಿಶಾಖ ಎನ್. ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ. 'ನೀವು ಕೇಳಿದಿರಿ' ವಿಭಾಗದಲ್ಲಿನ ಈ ಸಾರಿಯ ಪ್ರಶ್ನೆಗಳು ಎಷ್ಟು ಚೆನ್ನಾಗಿವೆಯೋ, ನಮ್ಮ ರಾಮ್ ಅವರ ಉತ್ತರಗಳೂ ಅಷ್ಟೇ ಸೊಗಸಾಗಿವೆ. ಮುಖಪುಟ ಲೇಖನ 'ಎಲ್ಲರ ಪಾಲಿನ ಅಮ್ಮಂದಿರು' ಹೃದಯವನ್ನು ಮುಟ್ಟಿದ ಬರಹಗಳು. ಬಹುತೇಕ ಎಲ್ಲ ದಾದಿಯರೂ ರೋಗಿಗಳ ಪಾಲಿನ ಅಮ್ಮಂದಿರೇ ಆಗಿರುತ್ತಾರೆ. ಅವರಿಗೊಂದು ಸಲಾಂ.

—ಅರುಣ ಬಿ. ಕುಲಕರ್ಣಿ, ಕೋಡಿಕೊಪ್ಪ

### ಬೈಕ್‌ನಲ್ಲಿ ಭಾರತ ದರ್ಶನ




'ಬೈಕ್‌ನಲ್ಲಿ ಭಾರತ ದರ್ಶನ' (ಸುಮಲತಾ ಎನ್., ಮೇ 19) ಲೇಖನ ಓದಿ ಅಚ್ಚರಿಯಾಯಿತು. ಮಹಿಳೆ ಎಂತಹ ಸಾಧನೆಯನ್ನೂ ಮಾಡಬಲ್ಲಳು ಎಂಬುದಕ್ಕೆ ಇದಕ್ಕಿಂತಲೂ ಉದಾಹರಣೆ ಬೇಕೆ? ಅವರು ಎಲ್ಲರಿಗೂ ಸ್ಫೂರ್ತಿಯಾಗಿದ್ದಾರೆ.

—ವೆಂಕಟೇಶ್, ದಾವಣಗೆರೆ

### ಚೆಂಕಿಯಲ್ಲಿ ಅರಳಿದ ಆಟಗಾರ



'ಚೆಂಕಿಯಲ್ಲಿ ಅರಳಿದ ಆಟಗಾರ' (ಎನ್. ವಿಶಾಖ, ಮೇ 19) ಲೇಖನ ಚೆನ್ನಾಗಿತ್ತು. ನಿಜವಾಗಲೂ ರಶೀದ್ ಖಾನ್ ಪ್ರತಿಭಾವಂತ ಆಟಗಾರ. ಉತ್ತಮ ಆಲ್ರೌಂಡರ್, ಗೇಮ್ ಚೇಂಬರ್ ಎಂದು ಸಾಬೀತುಪಡಿಸಿದ್ದಾರೆ. ಅವರ ಸಾಧನೆಗೆ ನನ್ನಿಂದ ಸಲಾಂ.

—ಭೋಜರಾಜ ಕಾವ್ರಾಡಿ, ಕುಂದಾಪುರ

### ನವಿರು ಹಾಸ್ಯದ ಕಚಗುಳಿ

'ಬ್ರಹ್ಮ ನಿಂಗೆ ಜೋಡಿಸ್ತೀನಿ' (ವೈ.ಕೆ. ಸಂಧ್ಯಾಶರ್ಮ, ಮೇ19) ಮಂದಹಾಸದ ಲೇಖನ ಓದಿ ಮೈಯಲ್ಲಿ ಲಘುಕಂಪನವಾಯ್ತು. ನಮ್ಮ ಮನೆ ಕತೆಯನ್ನು ಲೇಖಕಿಗೆ ಯಾರು ಹೇಳಿದರು? ಯಾರ ಪಿತೂರಿ ಇರಬಹುದು ಅನ್ನೋ ಅನುಮಾನವೂ ಕಾಡಿತು. ವ್ಯತ್ಯಾಸ ಇಷ್ಟೆ, ಕಮ್ಲೂ ಜಾಗದಲ್ಲಿ ನಾನಿರುವೆ. ಕಮ್ಲು ಗಂಡನ ಜಾಗದಲ್ಲಿ ನಮ್ಮವಳಿದ್ದಾಳೆ.

—ರಾಜೇಂದ್ರ ಪಾಟೀಲ, ಹುಬ್ಬಳ್ಳಿ

### ನರ್ಸ್‌ಗಳಿಗೆ ಸಲಾಂ



'ಎಲ್ಲರ ಪಾಲಿನ ಅಮ್ಮಂದಿರು' (ಮೈಲಾರಿ ಕರಬೀರ, ಶರತ್ ಆರ್. ಖಂಡೋಜಿ, ಶಾಂತಿ ಕೆ. ಅಪ್ಪಣ್ಣ, ಮೇ 19) ಮುಖಪುಟದ ಮೂರೂ ಲೇಖನಗಳೂ ಚೆನ್ನಾಗಿವೆ. ಶಾಂತಿ ಅವರ ಲೇಖನವಂತೂ ತುಂಬಾ ಸೊಗಸಾಗಿ ಮೂಡಿ ಬಂದಿದೆ. ಹೆತ್ತವರಲ್ಲದ ಹೊತ್ತವರಲ್ಲದ ಈ ಶುಶ್ರೂಷಕರ ಸೇವೆ ಅವಿಸ್ಮರಣೀಯ. ಇವರೆಲ್ಲಾ ಪ್ರಾತಃಸ್ಮರಣೀಯರು.

—ಧನಲಕ್ಷ್ಮಿ ಪುರುಷೋತ್ತಮ್ ರಾವ್, ಕೋಲಾರ

ಲೇಖನ ಓದುವಾಗ ನನಗೆ ಅರಿವಿಲ್ಲದೇ ಭಾವಪರವಶಳಾಗಿದ್ದು ಸತ್ಯವಾದ ಸಂಗತಿ. ವಿಭಿನ್ನವಾದ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳನ್ನು ಯಾವುದೇ ಮುಜುಗರವಿಲ್ಲದೇ, ತಾರತಮ್ಯವಿಲ್ಲದೇ ಹೆತ್ತ ಅಮ್ಮಂದಿರ ಹಾಗೆಯೇ ಕಾಳಜಿ ತೋರಲು ಸಾಧ್ಯವಾಗುವುದು ಕೇವಲ ದಾದಿಯರಿಂದ ಮಾತ್ರ ಎಂಬ ಸತ್ಯಾಂಶವನ್ನು ವಿಶ್ಲೇಷಿಸಿರುವ ಮೈಲಾರಿ ಕರಬೀರ ಅವರಿಗೆ ಅಭಿನಂದನೆಗಳು.

—ಸುಶೀಲಾ ಬಿ.ಆರ್. ರಾಮಣ್ಣ, ಬೆಂಗಳೂರು

ಲೇಖನ ಸೊಗಸಾಗಿದೆ. ಮೂವರು ಸಂವೇದನಾಶೀಲ ನರ್ಸ್‌ಗಳ ವೃತ್ತಿ ಅನುಭವದ ಲೇಖನದೊಂದಿಗೆ ನರ್ಸ್‌ಗಳ ದಿನದಂದೇ 'ಸುಧಾ' ನಮ್ಮ ಕೈ ಸೇರಿದ್ದು ವಿಶೇಷ. ನರ್ಸ್‌ಗಳ ಘನತೆಯ ಬಗ್ಗೆ, ಔದಾರ್ಯದ ಬಗ್ಗೆ ಎಷ್ಟು ಹೊಗಳಿದರೂ ಕಡಿಮೆಯೇ.

—ಎ.ಕೆ. ಅನಂತಮೂರ್ತಿ, ಬೆಂಗಳೂರು

### ಅಣಶಿಯೂ ಕನ್ನಡ ನಾಟಕವೂ...

'ಅಣಶಿಯೂ ಕನ್ನಡ ನಾಟಕವೂ' (ಅಕ್ಷತಾ ಕೃಷ್ಣಮೂರ್ತಿ, ಮೇ 19) ಪ್ರಬಂಧ ಚೆನ್ನಾಗಿದೆ. ಅಲ್ಲಿನ ಮೂಲ ಜನರ ನೈಜ ಜನಜೀವನವನ್ನು ಪ್ರತಿಬಿಂಬಿಸುವಲ್ಲಿ ಸಫಲವಾಗಿದೆ.

—ಸಖಾರಾಮ್ ನಾಯಕ್ ರಾಣೆ, ಧಾರವಾಡ

### ತವರಿಗೆ ಮರಳಿದ ಗಂಧರ್ವ

'ತವರಿಗೆ ಮರಳಿದ ಗಂಧರ್ವ' (ಉಮಾ ಅನಂತ್, ಮೇ 19) ಲೇಖನ ಚೆನ್ನಾಗಿದೆ. ಹಿಂದೂಸ್ತಾನಿ ಸಂಗೀತದ ಮೇರುಗಾಯಕ ರಾಜಶೇಖರ ಮನ್ಸೂರ ಅವರು ಅಗಲಿದ್ದು ಸಂಗೀತ ಕ್ಷೇತ್ರಕ್ಕೆ ತುಂಬಲಾರದ ನಷ್ಟ. ಅಂಥ ಗಾಯಕರನ್ನು ಸ್ಮರಿಸಿಕೊಂಡಿರುವುದು 'ಸುಧಾ' ಪತ್ರಿಕೆಯ ಸಾಂಸ್ಕೃತಿಕ ಅಭಿರುಚಿಯನ್ನೂ ಪ್ರತಿಬಿಂಬಿಸುವ ಹಾಗಿದೆ. ಅವರ ಶಿಷ್ಯೆ ಜಯದೇವಿ ಜಂಗಮಶೆಟ್ಟಿ ಅವರು ಗುರುಗಳ ನೆನಪಿಸಿಕೊಂಡು ಆಡಿರುವ ಮಾತುಗಳೂ ಅಷ್ಟೇ ಚೆನ್ನಾಗಿವೆ.

—ಗುಣಶೇಖರ ಆರ್.ಕೆ., ಹೊನ್ನಾವರ

### ನಮ್ಮ ದೇವರು

'ನಮ್ಮ ದೇವರು' (ರಾಜಶೇಖರ ಕುಕ್ಕುಂದಾ, ಮೇ 19) ಮಕ್ಕಳ ಪದ್ಯ ಚಂದವಾಗಿದೆ. ನಾವು ಯಾರಲ್ಲಿ ದೇವರನ್ನು ಕಾಣಬೇಕು ಎಂಬುದನ್ನು ತುಂಬ ಸರಳವಾಗಿ, ಅಷ್ಟೇ ಸುಂದರವಾಗಿ ಪದ್ಯದಲ್ಲಿ ಹೇಳಿದ್ದಾರೆ ಕವಿಗಳು. ಭೂಮಿ, ಸೂರ್ಯ, ಗಾಳಿ, ಗುರುಗಳು, ಅಮ್ಮ, ಅಪ್ಪ ಹೀಗೆ ಹಲವು ರೂಪಗಳಲ್ಲಿ ಸದಾ ನಮ್ಮೆದುರಿಗೆ ಕಾಣಸಿಗುತ್ತಿರುವ ದೇವರುಗಳನ್ನು ಮಕ್ಕಳಿಗೆ ಪರಿಚಯಿಸುವುದೇ ಎಷ್ಟು ಚೆನ್ನಾಗಿದೆಯಲ್ಲವೇ?

—ಸನ್ಮತಿ ಜೈನ್, ದಾಂಡೇಲಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in